ಈ ಅಮಿತ್ ಭಾರತ ಬಿಟ್ಟುಹೋಗಿ ಸುಮಾರು ಇಪ್ಪತ್ತು ವರ್ಷಗಳೇ ಸಂದವು. ವಯಸ್ಸಾಗುತ್ತ ಹೋದಂತೆ ತವರುನಾಡಿನ ಬಗ್ಗೆ ವ್ಯಾಮೋಹ ಹೆಚ್ಚುತ್ತದೇನೋ. ಇಲ್ಲಿಯ ನಮ್ಮ ಗೋಷ್ಠಿಗೆ ಬರುವುದು ಒಂದು ನೆಪ, ತಮ್ಮ ಸಂಬಂಧಿಕರನ್ನೆಲ್ಲಾ ಭೆಟ್ಟಿಯಾಗಿ ಹೋಗುತ್ತಿದ್ದ. ಮೇಲಿಂದ ಮೇಲೆ ಚರ್ಚಾಗೋಷ್ಠಿಗಳನ್ನು ಏರ್ಪಡಿಸಲು ನನಗೆ ದುಂಬಾಲು ಬೀಳುತ್ತಿದ್ದ. ಈ ಸಲ ಎಲ್ಲಿ ಏನು ಎಡವಟ್ಟು ಮಾಡಿಕೊಂಡನೋ ಏನೋ, ಇನ್ನೂ ಪ್ರತ್ಯಕ್ಷ ಆಗಲೊಲ್ಲ.

ಈಕಡೆ ದಿಲೀಪ ಡ್ರಿಂಕ್ಸ್‌ನೊಂದಿಗೆ ಕನಸು ಕಾಣುತ್ತ ಕುಳಿತರೆ ಆ ಕಡೆ ಲಖನ್ ಮೀನುಖಾದ್ಯಗಳನ್ನು ಸವಿಯುತ್ತ ಕುಳಿತಿದ್ದ. 'ದಯಮಾಡಿ ಸ್ವಲ್ಪ ನಿಧಾನಿಸಿ, ಅಮಿತ್ ಬಂದ ಮೇಲೆ ಅವನಿಗೂ ಸ್ವಲ್ಪ ಕಂಪನಿ ಕೊಡೋಣ' ಎಂದು ಎಚ್ಚರಿಸಿದೆ. ಆದರೆ ಅವರು ಕೇಳಬೇಕಲ್ಲ? ದಿಲೀಪನ ಉರ್ದು ಶಾಯರಿ ಶುರು ಆಗಿಯೇಬಿಟ್ಟಿತು. ಸ್ವಲ್ಪೇ ಸಮಯದಲ್ಲಿ ಗೇಟಿನ ಸಪ್ಪಳ ಕೇಳಿಸಿತು. ಮೂವರೂ ಹರ್ಷಿತರಾಗಿ ಅಮಿತ್‌ನನ್ನು ಬರಮಾಡಿಕೊಳ್ಳಲು ಹೋದೆವು.

'ಕ್ಷಮಿಸಿ ಮಿತ್ರರೇ, ಸ್ವಲ್ಪ ಅಡಚಣೆ ಉಂಟಾಗಿ ತಡ ಆಯ್ತು' ಎಂದು ವಿಷಾದಿಸಿದ. 'ಅಂತೂ ಈಗಲಾದರೂ ಬಂದೆಯಲ್ಲಾ, ಬಾ' ಅಂತ ಸ್ವಾಗತಿಸಿದೆವು. 'ನಡೆಯಿರಿ ಒಳಗೆ ಹೋಗೋಣ, ಮತ್ತಷ್ಟು ತಡ ಮಾಡುವುದು ಬೇಡ. ಆದಷ್ಟು ಬೇಗ ನಮ್ಮ ನಮ್ಮ ಫ್ಯಾಂಟಸಿ ಲೋಕ ಸೇರೋಣ' ಅಂತನ್ನುತ್ತ ನಮ್ಮನ್ನು ಅವನೇ ಕರೆದುಕೊಂಡು ಒಳಗೆ ಬಂದ.

'ಆದರೂ ಸ್ವಲ್ಪ ಸುಧಾರಿಸಿಕೋ, ದೂರದಿಂದ ಬಂದಿರುವಿ' ಎಂದೆ.

'ಇಲ್ಲಾ ದೋಸ್ತ್, ನಾನು ಇಂಡಿಯಾಕ್ಕೆ ಬಂದು ಒಂದು ವಾರ ಆಯ್ತು. ನಮ್ಮ ಸಂಬಂಧಿಕರನ್ನು ಭೆಟ್ಟಿಯಾಗೇ ಇಲ್ಲಿಗೆ ಬರ್ತಾ ಇರೋದು' ಅಂದ. ಅಮೆರಿಕದಿಂದ ಬಂದವ ಇಂಥದೊಂದು ಚಿಕ್ಕ ಬ್ಯಾಗಿನೊಂದಿಗೆ ಬಂದಿದ್ದಾನಲ್ಲಾ ಅಂತ ಶುರುವಾದ ನನ್ನ ಅನುಮಾನಕ್ಕೆ ತಕ್ಕ ಉತ್ತರ ಸಿಕ್ಕಂತಾಗಿತ್ತು. 'ಆ ಬಗ್ಗೆ ನಮಗೇನೂ ಮಾಹಿತಿ ಕೊಟ್ಟಿಲ್ಲವಲ್ಲ' ಅಂತ ಲಖನ್ ಆಕ್ಷೇಪ ಎತ್ತಿದ. 'ಅದಕ್ಕೂ ಕ್ಷಮೆ ಕೋರುತ್ತೇನೆ' ಅಂದ. 'ನಿನ್ನ ಪಾಲಿನ ನಾಷ್ಟಾ ಹಾಗೇ ಇದೆ, ಮೊದಲು ಅದನ್ನು ಮುಗಿಸು' ಎಂದು ಸೂಚಿಸಿದೆ. 'ಅದನ್ನು ಮಾಡ್ತೇನೆ. ಜೊತೆಜೊತೆಗೆ ನಮ್ಮ ಕಾರ್ಯಕ್ರಮವೂ ನಡೆಯಲಿ. ಮೊದಲು ದಿಲೀಪ್ ಶುರು ಮಾಡಲಿ' ಎಂದ. ಗೋಷ್ಠಿಯ ನಿರ್ವಾಹಕನೂ ಅವನೇ.

ಈ ಮಾತಿಗಾಗಿಯೇ ದಿಲೀಪ್ ದಾರಿಕಾಯುತ್ತಿದ್ದ. ಶುರು ಮಾಡಿಯೇಬಿಟ್ಟ.

'ಅಂತರಿಕ್ಷದಲ್ಲೊಂದು ದೂರದ ಗ್ರಹದಿಂದ ರೂಪಸಿಯೊಬ್ಬಳು ನಮ್ಮ ಗ್ರಹಕ್ಕೆ ಬರ್ತಾಳೆ. ಮುಂಬೈ ಸಮುದ್ರ ತೀರದಲ್ಲಿ ಇಳಿದು ತನ್ನ ಪ್ರಿಯಕರನನ್ನು ಭೆಟ್ಟಿ ಆಗ್ತಾಳೆ...' ಅಂತ ಶುರು ಮಾಡಿದ. ಲಖನ್ ಮಧ್ಯದಲ್ಲಿಯೇ ಬಾಯಿ ಹಾಕಿ 'ಮಹಾರಾಯಾ, ಪ್ರತಿಸಲ ಇದನ್ನೇ ಹೇಳ್ತಾ ಇರುವಿ, ಇನ್ನೂ ಈ ಕಥೆಗೆ ಒಂದು ಸಮರ್ಪಕ ಅಂತ್ಯ ಹೊಳೆಯಲಿಲ್ಲವೇ ನಿನಗೆ? ಹೊಸದೇನಾದರೂ ಇದ್ದರೆ ಹೇಳು' ಅಂದ.

'ಇದ್ದದ್ದು ಇದ್ದ ಹಾಗೆಯೇ ಇರುವಾಗ ಹೊಸದೇನನ್ನು ಹೇಳಲಿ? ನೀ ಬೇಡ ಬಿಡು, ಅಮಿತ್ ನನಗೆ ದಾರಿ ತೋರಿಸುತ್ತಾನೆ' ಎಂದು ಆಸೆಗಣ್ಣಿನಿಂದ ಅಮಿತ್‌ನತ್ತ ನೋಡಿದ ದಿಲೀಪ್.

'ಸುಖಾಂತ್ಯ ಬೇಕೋ, ಅಥವಾ ದು:ಖಾಂತ್ಯವೋ?' ಅಮಿತ್ ಕೇಳಿದ.

'ಸುಖಾಂತ್ಯವೇ ಇರಲಿ.'

'ಖಂಡಿತಾ ಯೋಚಿಸುತ್ತೇನೆ' ಎಂದು ಭರವಸೆ ಕೊಟ್ಟ.

ಅವನದು ಮುಗಿಯಿತು ಎಂದುಕೊಳ್ಳುತ್ತ ಲಖನ್ ತನ್ನ 'ಸ್ಮೃತಿದರ್ಶಕ' ಕಥೆ ಪ್ರಸ್ತಾಪಿಸಿದ. 'ಎಷ್ಟೋ ವರ್ಷಗಳಿಂದ ಯೋಚಿಸುತ್ತಿದ್ದೇನೆ, ನಮ್ಮ ನೆನಪುಗಳನ್ನು ಪ್ರೊಜೆಕ್ಟರ್ ಮೂಲಕ ಎದುರಿಗಿನ ಪರದೆಯ ಮೇಲೆ ನೋಡುವ ಕಾಲ ಯಾವಾಗ ಬರುತ್ತದೋ ಅಂತ. ಅದು ಸಾಧ್ಯವಾದರೆ ನೆನಪುಗಳನ್ನು ಹಿಂದೆ